M 1299 SATYAVADI Founded1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 221] ಸೋಮವಾರ 16—8—48 [ಬಿಡಿ ಪ್ರತಿ 3 ಪೈ

— ಸ್ವಾತಂತ್ರ್ಯೋತ್ಸವ —

ಇಂದೆಮ್ಮ ಭಾರತವು ಪರತಂತ್ರತೆಯ ದಾಟಿ ಸಂಭ್ರಮದೆ
ನೆರೆಮೆರೆವ ಪುಣ್ಯ ದಿವಸ।
ಇಂದಲೀ ದೇಶಮಾತೆಯ ವೀರಸುತರೆಲ್ಲ ಗಳಿಸಿದಾ
ಸ್ವಾತಂತ್ರ್ಯ ಸವಿವ ದಿವಸ।
ಇಂದಲೀ ಸತ್ಯಧರ್ಮಾಹಿಂಸೆಗಳ ಪೆರ್ಮೆಯನು ಭಾರತವು
ತೋರಿ ನಲಿವ ದಿವಸ।
ಇಂದಲೀ ಶುಭ ದಿವಸ ವುಲ್ಲಾಸಕರವೆನಿಪ ವರ ಸೌಖ್ಯ
ಶಾಂತಿ ಸಂಭ್ರಮ ವಿಲಾಸ।
ಮೈಸೂರ ನಲ್ವೆಸರು ದೆಸೆದೆಸೆಯಲಿ।
ಭಾಸಿಸಲಿ! ಭಾರತವು ಗೆಲವೊಂದಲಿ।
ದೇಶದಲಿ ಸತ್ಯ ಧರ್ಮವು ನೆಲಸಲಿ।
ಶ್ರೀ ಶಕ್ತಿ ಚಾಮುಂಡಿ ಸಲೆ ಸಲಹಲಿ॥

ಮಹಾ ವಿದ್ವಾನ್ ಶ್ರೀಕಂಠಶಾಸ್ತ್ರಿ.

ಗಾಂಧೀಜೀ ಸ್ಮಾರಕ ನಿಧಿ ಬಗ್ಗೆ ಸರ್ಕಾರಿ ಆಜ್ಞೆ

ಮಹಾತ್ಮ ಗಾಂಧೀಜೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಸರ್ಕಾರಿ ನೌಕರರ ಒಂದು ತಿಂಗಳ ವೇತನದಲ್ಲಿ ಮುಮ್ಮಾರನೆ ಒಂದು ಭಾಗ ಮುಡುಪಿಡುವಂತೆ ಮೈಸೂರು ಪ್ರಭುತ್ವ ಆಜ್ಞೆ ಜಾರಿ ಮಾಡುವುದು ಎಂದು ಮೈಸೂರ್ ಕಾಂಗ್ರೆಸ್ ಸಾಹುಕಾರ್ ಶ್ರೀ ಚನ್ನಯ್ಯನವರು ನಿನ್ನೆ ಸಂಜೆ ರಂಗಾಚಾರ್ಲು ಪುರಭವನ ಪಾರ್ಕಾರದಲ್ಲಿ ಸೇರಿದ್ದ ಸ್ವಾತಂತ್ರ್ಯೋತ್ಸವ ಸಭೆಯಲ್ಲಿ ತಿಳಿಸಿದರು

ಪಂ॥ ಜವಾಹರಲಾಲ್ ನೆಹರುರವರು ನಿನ್ನೆ ಬೆಳಿಗ್ಗೆ ದೆಹಲಿ ರಕ್ತಕೋಟೆ ಮೇಲೆ ಭಾರತ ಧ್ವಜಾರೋಹಣ ಮಾಡಿದರು.

ಮೈಸೂರು ಸಂಸ್ಥಾನಾದ್ಯಂತ ನಿನ್ನೆ ಸ್ವಾತಂತ್ರ್ಯೋತ್ಸವ ವೈಭವದಿಂದ ಜರುಗಿತು.

ನಗರದಲ್ಲಿ ಸ್ವಾತಂತ್ರ್ಯೋತ್ಸವ

ಮೈಸೂರು ನಗರದಲ್ಲಿ ನಿನ್ನೆ ದಿವಸ ಸ್ವಾತಂತ್ರ್ಯೋತ್ಸವ ವೈಭವದಿಂದ ಜರುಗಿತು. ಬೆಳಿಗ್ಗೆ ರಂಗಾಚಾರ್ಲು ಪುರಭವನ ಮೈದಾನದಲ್ಲಿ ಧ್ವಜಾರೋಹಣ ನಡೆಯಿತು. ಮಧ್ಯಾಹ್ನ ಗಾಂಧೀಜೀ ಸ್ಮಾರಕ ನಿಧಿಗೆ ಹಣ ವಸೂಲಿ ಜರುಗಿತು. ಸಂಜೆ ಪುರಭವನ ಮೈದಾನದಲ್ಲಿ ಸಾರ್ವಜನಿಕ ಸಭೆ ಜರುಗಿತು.

ಆಗಸ್ಟ್ ತಾ॥ 15 ಎಂದಿಗೂ ನನ್ನ ಸ್ಮೃತಿಯಿಂದ ಹೋಗಲಾರದ ಎಂದು ಭಾರತದ ಮಾಜಿ ಗ॥ ಜ॥ ವೈಸ್‌ರಾಂಟ್ ಬೇಟನ್ ತಿಳಿಸಿದ್ದಾರೆ

ಮೈಸೂರು ಪತ್ರಿಕೋದ್ಯೋಗಿ ಸಂಘದಲ್ಲಿ ಸ್ವಾತಂತ್ರ್ಯೋತ್ಸವ ನಿನ್ನೆ ವೈಭವದಿಂದ ಜರುಗಿತು ರಾತ್ರಿ ಭೋಜನ ಕೂಟ ಏರ್ಪಾಡಾಗಿತ್ತು

ಬೆಂಗಳೂರಿನಲ್ಲಿ ನಿನ್ನೆ ಶ್ರೀಮನ್ಮಹಾರಾಜರು ವಿಲ್ಲಿಂಗ್ಡನ್ ಸೆಲ್ಯೂಟ್ ಪಡೆದರು

ಮ ಹಾ ತ್ಮ

ಮಾನವನ ಕಷ್ಟ ಪರಿಹರಿಸುವ ವಿಷಯದಲ್ಲಿ ಗಾಂಧಿಯಂಥ ಮಹಾ ವ್ಯಕ್ತಿಯನ್ನು ಮಾನವ ಜಗತ್ತು ಈವರೆಗೆ ಕಂಡಿದಿಲ್ಲ. — ನೊಕ್ರಾತಿ ಸಾಷಾ.

ಭಾರತ ಮತ್ತು ಪಾಕೀಸ್ತಾನ ಗ॥ ಜ॥ ಗಳಿಗೆ ಅಮೇರಿಕ ಅಧ್ಯಕ್ಷ ಟ್ರೂಮನ್ ಶುಭಾಶಯ ಕಳಿಸಿದ್ದಾರೆ.

ಭಾರತ ಸ್ವಾತಂತ್ರ್ಯೋತ್ಸವ ಅಂಗವಾಗಿ ಮೊನ್ನೆ ವಾಷಿಂಗ್ಟನ್ನಿನಲ್ಲಿ ಶಕುಂತಲ ಚಿತ್ರ ಪ್ರದರ್ಶನವಾಯಿತು

ಗಡಿನಾಡಿನ ಬಬ್ರಾ ಗ್ರಾಮದಲ್ಲಿ ಪಾಕೀಸ್ತಾನ್ ಪೋಲೀಸರ ಗುಂಡಿಗೆ 15 ಮಂದಿ ಕೆಂಪಂಗಿಯವರು ಬಲಿಯಾದ

ಗಡಿನಾಡು ಗಾಂಧಿ ಕುಮಾರಪ್ಪ ಸ್ತಿಪಾಸ್ತಿಗಳನ್ನು ಅಲ್ಲಿನ ಸರ್ಕಾರ ಹರಣ ಮಾಡಿದೆ.

ವಿಶ್ವಸಂಸ್ಥೆ ಕಾಶ್ಮೀರ ವಿಚಾರವಾಗಿ ಆಜ್ಞೆಯನ್ನು ಭಾರತ ಸರ್ಕಾರವು ಪಾಲಿಸುವುದಿಲ್ಲವೆಂದು ಹೇಳಲಾಗಿದೆ

ಕಲ್ತಿಕೋಟೆಯಲ್ಲಿ ಕ್ರಿಶ್ಚನ್ ಮತಕ್ಕೆ ಸೇರಿದ್ದ 100 ಮಂದಿ ಹರಿಜನರು ಪುನಃ ಹಿಂದುಗಳಾದರು

ಸ್ವಾತಂತ್ರ್ಯೋತ್ಸವ ಸಂದೇಶದಲ್ಲಿ ವಿಶ್ವ ಸ್ಥಗತಿ ಬಗ್ಗೆ ಭಾರತದ ಪಾತ್ರ ಪ್ರಮುಖವಾಗಬೇಕು ಎಂದು ರಾಜಾಜಿ ತಿಳಿಸಿದ್ದಾರೆ

ಭಾರತದ ಅಭ್ಯುದಯವನ್ನು ಕೋರಿ ಬ್ರಿಟೀಷ್ ಪ್ರಧಾನಿ ಅಟ್ಲಿ ಪಂ॥ ನೆಹರುವಿಗೆ ಸಂದೇಶ ಕಳಿಸಿದ್ದಾರೆ

ವುಡ್‌ಲ್ಯಾಂಡ್ಸ್

ಸ್ವಾತಂತ್ರ್ಯ ವಾರ್ಷಿಕೋತ್ಸವ ಪ್ರಯುಕ್ತ

13—8—48 ರಿಂದ

ಪಾತ್ರ: ಟಿ ಆರ್. ಮಹಾಲಿಂಗಂ ಬಿ. ಆರ್. ಪಂತಲು, ಸಾರಂಗಪಾಣಿ ಟಿ. ಎಂ. ಜಯಲಕ್ಷ್ಮಿ ಬೇಬಿ ಕಮಲ

ಪಾತ್ರವಹಿಸಿರುವ

WE TWO

ನಾವು ಇಬ್ಬರು

(ಅತಿ ಸುಂದರ ತಮಿಳು ಚಿತ್ರ)

(ಪ್ರತಿದಿನ 3 ಆಟಗಳು)

—ಜಯಮುನಿ ರಿಲೀಸ್

ಶ್ರೀ 16-8-48 ॥ಶ್ರೀ॥ ನಂ. 101

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಧರ್ಮಾದಾಯದ ವ್ಯವಸ್ಥೆ

(ಮುಂದುವರಿದುದು)

ಧರ್ಮಾದಾಯ ನಿಧಿಗಳ ವ್ಯವಸ್ಥೆಯನ್ನು ಸರಿಪಡಿಸುವ ವಿಷಯದಲ್ಲಿ ಜಯಕರರು ಈ ಸೂಚನೆಯಿತ್ತರು— ...ದರ ನಿರೀಕ್ಷಣೆಯ ಭಾರವನ್ನು ...ರ್ಜಿನ ಯಾರಾದರೂ ಅಧಿಕಾರಿಗೆ ...ಬೇಕು. ಮತ್ತು ಸರ್ಕಾರವು ...ವಾಬ್ದಾರಿಯಲ್ಲಿ ಕೇವಲ ನಾ...ನದ ಕಾರ್ಯವನ್ನಿಟ್ಟುಕೊಳ್ಳ...ಬೇಕು. ಧರ್ಮಾದಾಯ ನಿಧಿಯ ...ಸಾರ ಸಂಬಂಧದಲ್ಲಿ ಯಾವುದಾ...ತೂ ವಿವಾದವೆದ್ದರೆ; ಅಡ್ವೊಕೇಟ್-ಜನರಲ್ಲರ ಸಮ್ಮತಿಯಿಲ್ಲದೆ ಕೋರ್ಟಿನಲ್ಲಿ ...ಮೊಖದ್ದಮೆ ಹೂಡಬಾರದು. ಬೇರೆ ಬೇರೆ ಧರ್ಮಾದಾಯಗಳ ಧ್ಯೇಯವು ಬಂದಿದ್ದಾಗ, ಅವುಗಳ ವಿಶ್ವಾಸೀ ಟ್ರಸ್ಟಿಗಳನ್ನು ಚಾರಿಟಿ ಕಮಿಷನರ ವ...ಧ್ಯಸ್ಥಿಕೆಯಲ್ಲಿ ಶುಭೇಚ್ಛಾಪೂರ್ವಕವಾಗಿ ಏಕೀಕರಣಗೊಳಿಸಬಹುದು. ಆದರೆ ಇದಕ್ಕಾಗಿ ಯಾವುದೇ ತರಹದ ಒತ್ತಾಯ ಮಾಡಬಾರದು. ಯಾವ ದಾದರೂ ತೊಂದರೆಯ ಕಾರಣದಿಂದ ಧಾತೃವಿನ ಇಚ್ಛಾಪೂರ್ತಿಯು ಆಗದಿದ್ದಾಗ ಅದರ ವಿನಿಯೋಗವು ಸಂಸ್ಕೃತ ಭಾಷೆಯ ಅಗ್ಯಯನ ಮತ್ತು ಹಿಂದೂ ಸಂಸ್ಕೃತಿಯ ಅನುಶೀಲನದಲ್ಲಿಯೇ ವಿನಿಯುಕ್ತವಾಗಲಿ. ಮಠ – ದೇವಾಲಯಗಳ ವ್ಯವಸ್ಥೆಯು ಹಿಂದೂಧರ್ಮ ಹಾಗೂ ಸಂಸ್ಕೃತಿಯ ಪರಂಪರೆಯನ್ನು ಪೋಷಿಸುತ್ತದೆ. ಧರ್ಮಾದಾಯದ ಮೂಲ ಭಾವನೆಯನ್ನು ಉದಾರತಾ ಪೂರ್ವಕವಾಗಿ ವಿಚಾರಮಾಡಬೇಕು; ಅನ್ಯಥಾ ಅದರ ಮರ್ಯಾದೆಯು ನಶಿಸುವುದು'.

ಇದಲ್ಲದೆ ಬೊಂಬಾಯಿ ಸರಕಾರದ ಕಾನೂನು ಸಲಹೆಗಾರರಾದ ಶ್ರೀ ಲಾಡರೂ ಕೂಡ ಹೀಗೊಪ್ಪಬೇಕಾಯಿತು— 'ನಿಧಿಯಲ್ಲಿ ಉಳಿತಾಯದಿಂದಲೇ ಅದರ ಸಾರ್ವಜನಿಕ ಉಪಯೋಗವನ್ನು ಸಮರ್ಥನೆ ಮಾಡಬಹುದು. ಆದರೆ ಯಾವುದಾದರೂ ನಿಧಿಯು ಯಾವುದಾದರೂ ವಿಶೇಷ ಕಾರ್ಯಕ್ಕಾಗಿದ್ದರೆ ಅದನ್ನು ಬಲವಂತವಾಗಿ ಸಾರ್ವಜನಿಕ ಉಪಯೋಗದಲ್ಲಿ ತೆಗೆದುಕೊಳ್ಳುವುದು ಸರಿಯಲ್ಲ. ಮುಂದೆ ಇಂತಹ ಸಂಸ್ಥೆಗಳನ್ನು ಸಂಸ್ಥಾಪಿಸಬಾರದೆಂಬುವುದು ಉಚಿತ. ಆದರೆ ಅವುಗಳ ಮೇಲೆ ಒತ್ತಾಯ ಮಾಡುವುದು ಖಂಡಿತ ಉಚಿತವಲ್ಲ'.

ಬೊಂಬಾಯಿಯಲ್ಲಿ ಅಲ್ಲದೆ ಬಿಹಾರ್-ಪ್ರಾಂತ್ಯದ ಅಸೆಂಬ್ಲಿಯಲ್ಲಿಯೂ ಧರ್ಮಾದಾಯ ನಿಧಿಯ ವ್ಯವಸ್ಥೆಗಾಗಿ ಒಂದು ಕಾಯದೆ ಬಂದಿದೆ. ಅವರು ಡಾಕ್ಟರ್ ಜಯಕರ ಹೇಳಿಕೆಯನ್ನು ನೋಡಿದರೆ ಒಳ್ಳೆಯದು.

ಸಂಯುಕ್ತ ಪ್ರಾಂತ್ಯದ ಪ್ರಧಾನ ಮಂತ್ರಿ ಶ್ರೀ ಗೋವಿಂದವಲ್ಲಭಪಂತರು ಅಯೋಧ್ಯೆಯ ಮಹಂತರಿಗೆ ಹೀಗೆ ಆಶ್ವಾಸನವಿತ್ತಿದ್ದರು— 'ಜಮೀನ್ದಾರಿ ಪದ್ಧತಿಯು ನಾಶದೊಂದಿಗೆ ಧಾರ್ಮಿಕ ಸಂಪತ್ತನ್ನೇನೂ ಕಿತ್ತುಕೊಳ್ಳುವುದಿಲ್ಲ'. ಆದರೆ ಅವರ ಅಸೆಂಬ್ಲಿಯಲ್ಲಿ ಸುವ್ಯವಸ್ಥೆಯು ಹೆಸರಿನಲ್ಲಿ ಧರ್ಮಾದಾಯ ನಿಧಿಯನ್ನೆಲ್ಲಾ ಸ್ವಾಹಾಕಾರಮಾಡಲು ಕಾಯದೆ ಬರಲಾರದೇ?

'ದುರುಪಯೋಗ' ವಾಗುತ್ತದೆನ್ನುತ್ತಾರೆ. ಗುರುಪಯೋಗವೆಲ್ಲಿ ತಾನೇ ಆಗುವುದಿಲ್ಲ? ಸಾರ್ವಜನಿಕ ಅಥವಾ ಸರಕಾರಿ ನಿಧಿಗಳಲ್ಲೇ ದುರುಪಯೋಗವಾಗುತ್ತಿಲ್ಲವೇನು? ಸದಾ ಸದುಪಯೋಗವೇ ಆಗುವುದೇನು? ಆದದರಿಂದ ಅಪವಾದದ ಉದಾಹರಣೆಯಿಂದ ಕಾನೂನಿಗೆ ಕೈಹಾಕಬಾರದು ದುರುಪಯೋಗವಾಗುವುದನ್ನು ತಪ್ಪಿಸಬೇಕಾದುದೇನೋ ಅವಶ್ಯಕ. ಅದನೆ ಉದ್ದೇಶವನ್ನೇ ಬದಲಾಯಿಸುವುದು ವಿಶ್ವಾಸಘಾತ. ಮುಸ್ಲಿಂ ಆಡಳಿತವಿದ್ದಾಗಲೂ ಹೀಗಾಗಿರಲಿಲ್ಲ. ಈಗ ಜನಪ್ರಿಯ ಆಡಳಿತದಲ್ಲಿ ಹೀಗಾಗುವುದು ಸರಿಯಲ್ಲ.

ಕರ್ಮವೀರರಾಗಿರಿ

ನಿಷ್ಪ್ರಪಂಚತ್ವ ಹಾಗೂ ನಿವೃತ್ತಿಯ ಕಡೆಗೆ ಮುನ್ನಡೆದ ಸಾಧಕನ ಮುಂದೆ, ಸಪ್ರಪಂಚತ್ವವೂ ಪ್ರವೃತ್ತಿಯೂ ಎದ್ದುಕೊಳ್ಳುವುದು ಹೇಗೆ ವಿಫಲವೋ, ನಿಜವಾಗಿಯೂ ಅಂತೆಯೇ ಒಬ್ಬ ಪ್ರಗತಿಶೀಲನೂ ಕಾರ್ಯದಕ್ಷನೂ ಸಮಾಜದ ಹಾಗೂ ರಾಷ್ಟ್ರದ ಹಿತಚಿಂತನೆಯಲ್ಲಿ ಮಗ್ನನೂ ಆದ ಪುರುಷನ ಮುಂದೆ, ನಿವೃತ್ತಿಯೂ ನಿಷ್ಪ್ರಪಂಚತ್ವ ತೋರಿಕೊಳ್ಳುವುದು ವಿಘ್ನವೇ ಆಗಿದೆ. ಯಾವನು ಪ್ರಾಣಪಣದಿಂದ ಸಮಾಜ ಇಲ್ಲವೆ ರಾಷ್ಟ್ರದ ಉತ್ಥಾನದ ಸಲುವಾಗಿ ಪ್ರಯತ್ನಿಸಲು ಸಂಕಲ್ಪಿಸಿಬಿಟ್ಟನೋ, ಅವನಿಗೆ ಆ ಕಾರ್ಯದಲ್ಲಿ ವೈರಾಗ್ಯ ವುಂಟಾಗುವುದು ಸರ್ವಥಾ ಅನವಸರ ವೈರಾಗ್ಯವಾಗಿದೆ. ಜಗತ್ತನ್ನು ನಿಃಸಾರವೆಂದು ಬಗೆದು, ಎಲ್ಲ ಕಾರ್ಯಗಳಿಂದ ವಿಂಚಸಾಗಿ ನಿವೃತ್ತಿ ಪಾರಾಯಣರಾಗುವ ಮಾಹಾತ್ಮ್ಯವೂ ಕಡಿಮೆಯೇನೂ ಅಲ್ಲ ಆದರೆ ವಿಘ್ನಗಳಿಂದ ಅಥವಾ ಕಾಯ ಕ್ಲೇಶಗಳಿಂದ ಉದ್ವಿಗ್ನರಾಗಿ ಕರ್ತವ್ಯ ಪರಾಙ್ಮುಖರಾಗುವುದು 'ತಾಮಸತ್ಯಾಗ' ಇಲ್ಲವೆ ಹೇಡಿತನವೇ ಆಗುವುದು. ಪ್ರವೃತ್ತಿಯಲ್ಲಿ ಯಾರು ಜಯಶೀಲರಾಗಲಿಲ್ಲವೊ, ಅವರು ನಿವೃತಿಯಲ್ಲಿಯೂ ಹೇಗೆ ಜಯಶೀಲರಾದಾರು? ಎಷ್ಟೋ ಪೀಠರಾಗರು ನಿಷ್ಪ್ರಪಂಚಾವಸ್ಥೆಯಿಂದ ಸಪ್ರಪಂಚತ್ವದ ಕಡೆಗೆ ಬಾಗತೊಡಗುವುದೂ ಕಂಡುಬರುತ್ತದೆ ಅವರಿಗೆ ಅನೇಕ ಸಾಮಾಜಿಕ ಹಾಗೂ ರಾಷ್ಟ್ರೀಯ ಕಾರ್ಯಗಳಲ್ಲಿ ಮನಸ್ಸು ಹಿಡಿದಷ್ಟು ತಮ್ಮ ಪರಮ ಲಕ್ಷ್ಯಭೂತವಾದ ಧ್ಯಾನ, ಧಾರಣಗಳಲ್ಲಿ ಹತ್ತುವುದಿಲ್ಲ. ಆತ್ಮಕಲ್ಯಾಣದ ಮಾತ್ರ ಅವರಿಗೆ ವಿಸ್ಮೃತವಾಗಿ ಹೋಗುತ್ತದೆ. ದೇಶೋದ್ಧಾರ ನಾಟಕವು ಅವರೆದುರಿಗೆ ಅವಶ್ಯವಾಗಿ ಇರುತ್ತದೆ. ಆದರೆ ಯಾರಿಗೆ ಆತ್ಮೋದ್ಧಾರದಲ್ಲಿಯೇ ಸಾಫಲ್ಯವು ದೊರೆಯಿಲಿಲ್ಲವೊ, ಅವರಿಗೆ ಸಮಷ್ಟಿ ಜಗತ್ತಿನ ಉದ್ಧಾರದಲ್ಲಿ ಸಾಫಲ್ಯ ದೊರಕುವುದೆಂದು ಹೇಳುವುದೆಂತು? ವಾಸ್ತವದಲ್ಲಿ ತಮ್ಮ ಲಕ್ಷ್ಯದಿಂದ್ಚ್ಯುತರಾಗುವವರಿಗೆ ಎಲ್ಲಿಯೂ ಸಾಫಲ್ಯವಾಗುವುದಿಲ್ಲ. [ಸಶೇಷ

Save the Cow

ಗೋವಧೆ ನಿಲ್ಲಲಿ

ಈ ವಾರದ

ಓಂ ಜ್ಯೋತಿಷ್ಯ

ಮೇಷ—ಸಜ್ಜನ ಸಂ... ಆರ್ಥಿಕ ಲಾಭ. ಆರೋ... ವ್ಯಯ ಹೆಚ್ಚಬಹುದು.

ವೃಷಭ—ಆರೋಗ್ಯ ವು... ದಾಯ ವುಂಟು, ವ...ನೋವ್ಯಭೆ ದಿಲ್ಲ.

ಮಿಥುನ—ಖರ್ಚು ಹೆಚ್ಚು, ರೋಗ್ಯ ಭಯ, ಕಾರ್ಯಗಳಲ್ಲಿ ವಿ... ಗಳು ತಲೆದೋರುವುವು

ಕರ್ಕಾಟಕ—ಆರೋಗ್ಯ ವುಂಟು, ವ್ಯವಹಾರದಲ್ಲಿ ಜಯ ವುಂಟು, ಪರೋಪಕಾರ ಚಿಂತೆಯುಂಟು

ಸಿಂಹ—ಪ್ರಯತ್ನದಿಂದ ಕಾರ್ಯ ಸಿದ್ಧಿ; ಆದಾಯಕ್ಕೆ ಸರಿಯಾದ ಖರ್ಚು. ಧನ ಲಾಭ.

ಕನ್ಯಾ—ನುಸೋಸ್ಥಿತಿ ಸರಿಯಾಗಿರುವದಿಲ್ಲ; ಮಿತ್ರರ ಸಹಾಯ ವುಂಟು.

ತುಲಾ—ದೇಹಸ್ಥಿತಿ ಉತ್ತಮವಿರುವುದಿಲ್ಲ, ಧನ ಹಾನಿ; ಮಿತ್ರರಿಂದ ಸಹಾಯ ದೊರೆಯುತ್ತದೆ.

ವೃಶ್ಚಿಕ—ಆರೋಗ್ಯ ವುಂಟು, ... ಗೊಂಡ ಕಾರ್ಯಗಳಲ್ಲಿ ಜಯ ವುಂಟು ಧನ ಲಾಭ ವುಂಟು.

ಧನುಸ್ಸು—ಆರೋಗ್ಯ ವುಂ... ಆದರೆ ವ್ಯವಹಾರದಲ್ಲಿ ಚಿಂತೆಗೆ ಅ... ಶವಿದೆ. ಧನ ಚಿಂತೆಯೂ ಇರು...

ಮಕರ—ಆರೋಗ್ಯ ವುಂಟು ಹಾರದಲ್ಲಿ ಜಯ ವುಂಟು; ವ... ಗಿ ಕಾಲಹರಣೆ ಮಾಡದೆ ಸದು... ಗ ಪಡಿಸಿಕೊಳ್ಳಿ.

ಕುಂಭ—ಕಷ್ಟವು ಸುಖದ ವೇ... ರೂಪವೆಂದು ಅರಿತು ಕಷ್ಟಗಳಿಗೆ ಬ... ಸ ಬೇಡಿ. ಆರೋಗ್ಯ ವಿಷಯದಲ್ಲಿ ಜಾಗರೂಕರಾಗಿರಿ.

ಮೀನ—ಧನದ ವಿಷಯದಲ್ಲಿ ... ಗರೂಕತೆಯು ಅವಶ್ಯಕ; ಈ ... ಕೊಟ್ಟ ತೆಗೆದುಕೊಳ್ಳುವ ವ್ಯವ... ಆದಷ್ಟು ಕಡಿಮೆಯಾಗಿರಲಿ

At Opera

14—8—48

ವಿ. ಎ. ಜಲ್ಲಪ್ಪ—ಟಿ. ಪಿ. ... ಕೃಷ್ಣ — ಮಧುರಂ ಪಾ...

ಪರಂಜೋ...

(ಅವೋಘ ತಮಿಳು ...

.... ಪ್ರತಿದಿನ 3 ಆಟ...

Edited, Printed and P... by M S Krishna Rao at Satyavadi Press, Cham... Agrahar, Mysore,